ಅಸಲು ದಾವಾ ಸಂಖ್ಯೆ - 334/2012
ಡಿಡಬ್ಲ್ಯೂ - 01
ದಿನಾಂಕಃ 29-08-2024
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ.ಎನ್.ಎಸ್.ಪಿ ವಕೀಲರಿಂದಃ**

ಈ ದಾವೆಯಲ್ಲಿ ನಾನು ಪ್ರತಿವಾದಿ ನಂಬರ 1(ಎ) ಆಗಿದ್ದು, ಇಂದು ನಾನು ನನ್ನ ಮೌಖಿಕ ಸಾಕ್ಷ್ಯದ ಬದಲು ಈ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಇದರಲ್ಲಿ ಬರೆದ ಎಲ್ಲ ವಿಷಯ ನಿಜ ಮತ್ತು ಸರಿ ಇದ್ದು ನನಗೆ ಗೊತ್ತಿದೆ.

ನಾನು ಈ ಕೆಳಕಂಡ ದಸ್ತಾವೇಜುಗಳನ್ನು ಹಾಜರು ಪಡಿಸಿದ್ದೇನೆ.

ಆಸ್ತಿ ನಂಬರ 338/30/1 ರ 2012-13 ನೇ ಸಾಲಿನ ಆಸ್ತಿ ತೆರಿಗೆ ರಜಿಸ್ಟರ್ ಅನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 2 ಎಂದು ಗುರುತಿಸಲಾಯಿತು.

ಆಸ್ತಿ ನಂಬರ 338/30 ರ 2012-13 ನೇ ಸಾಲಿನ ಆಸ್ತಿ ತೆರಿಗೆ ರಜಿಸ್ಟರ್ ಅನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 3 ಎಂದು ಗುರುತಿಸಲಾಯಿತು.

ದಿಃ26-08-1998 ರ ಖರೀದಿ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 4 ಎಂದು ಗುರುತಿಸಲಾಯಿತು.

ದಿಃ20-10-2012 ರಂದು ಪುರಸಭೆ ಕಾರ್ಯಾಲಯ ಸವಣೂರುರವರು ನೀಡಿದ ಕಟ್ಟಡ ಪರವಾನಿಗೆ ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ.5 ಎಂದು ಗುರುತಿಸಲಾಯಿತು.

ಕಟ್ಟಡ ಕಟ್ಟುವ ನೀಲಿ ನಕ್ಷೆಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 6 ಎಂದು ಗುರುತಿಸಲಾಯಿತು.

ಒಂದು ಸಿಡಿ ಮತ್ತು ಮೂರು ಭಾವಚಿತ್ರಗಳನ್ನು ಹಾಜರುಪಡಿಸಿದ್ದು, ಸಿ.ಡಿ ಯನ್ನು ನಿಡಿ 7 ಎಂದು, ಮೂರು ಭಾವಚಿತ್ರಗಳನ್ನು (ವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು) ಕ್ರಮವಾಗಿ ನಿಡಿ.8 ರಿಂದ ನಿಡಿ 10 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**<u>ಪಾಟೀ ಸವಾಲುಃ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ, ನೀಡಲಾಯಿತು.</u>**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು